**ವ್ಯವಹಾರ ಹಿರಿಯ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆಂ.ಎ.ಎಫ್.ಸಿ ನ್ಯಾಯಾಲಯದಲ್ಲಿ, ಸೊರಬ**

ಅ.ದಾ ನಂ:– 4/2026

ವಾದಿಯರು:– ಶ್ರೀಮತಿ ಶಶಿಕಲಾ ಐ.ಬಿ ಮತ್ತು ಇನ್ನೊಬ್ಬರು.

–:ವಿರುದ್ಧ:–

ಪ್ರತಿವಾದಿಗಳು:– ಜಯಲಿಂಗಪ್ಪ ಎಂ ಮತ್ತು ಇನ್ನೊಬ್ಬರು.

**ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ಅಡಿಯಲ್ಲಿ 1ನೇ ಪ್ರತಿವಾದಿ ಸಲ್ಲಿಸಿದ ಮುಖ್ಯವಿಚಾರಣಾ ಪ್ರಮಾಣ ಪತ್ರ**

28/1/26

ಜಯಲಿಂಗಪ್ಪ ಎಂ ಬಿನ್ ಮಲ್ಲಪ್ಪ ಸುಮಾರು 59 ವರ್ಷ, ವ್ಯವಸಾಯಗಾರರು & ವ್ಯವಹಾರಸ್ಥರು, ಎಣ್ಣೆಕೊಪ್ಪ ಗ್ರಾಮ, ಆನವಟ್ಟಿ ಹೋಬಳಿ, ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ ವಾಸಿಯಾದ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ.

Copy Taken

1) ಈ ಮೇಲ್ಕಂಡ ಕೇಸಿನಲ್ಲಿ ನಾನು 1ನೇ ಪ್ರತಿವಾದಿಯಾಗಿದ್ದು, ಈ ಕೇಸಿನ ಎಲ್ಲಾ ಸಂಪೂರ್ಣ ವಿದ್ಯಾಮಾನಗಳನ್ನು ತಿಳಿದುಕೊಂಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು 2ನೇ ಪ್ರತಿವಾದಿಯ ಪರವಾಗಿಯೂ ಸಹ ಸಲ್ಲಿಸಿರುತ್ತೇನೆ.

2) 2ನೇ ಪ್ರತಿವಾದಿಯು ನನ್ನ ಸಹೋದರಿಯಾಗಿದ್ದು, 1ನೇ ವಾದಿಯು ನನ್ನ ಮೃತ ಸಹೋದರ ಪ್ರಕಾಶ ಎಂ ಇವರ ಹೆಂಡತಿಯಾಗಿದ್ದು, 2ನೇ ವಾದಿಯು ಸದರಿಯವರ ಮಗನಾಗಿರುತ್ತಾರೆ.

NOTARY DAKAPPA D ... GOVT. OF INDIA

3) ನನ್ನ ತಂದೆ ಮಲ್ಲಪ್ಪ ಎಂ ಇವರು ದಿನಾಂಕ:25–12–2018 ರಂದು ಹಾಗೂ ತಾಯಿ ಪಾರ್ವತಮ್ಮ ಇವರು ದಿನಾಂಕ:2810–2022 ರಂದು ಮೃತಪಟ್ಟಿದ್ದು, ಸದರಿಯವರಿಗೆ ನಾನು ಪ್ರಕಾಶ ಎಂ ಹಾಗೂ 2ನೇ ಪ್ರತಿವಾದಿ ಮಕ್ಕಳು ಇದ್ದು, ನಮ್ಮ ಪೈಕಿ ಪ್ರಕಾಶ ಎಂ ಇವರು ದಿನಾಂಕ:03–10–2020 ರಂದು ಮೃತಪಟ್ಟಿದ್ದು, 1ನೇ ವಾದಿ ಮತ್ತು 2ನೇ ವಾದಿ ಮೃತರ ಹೆಂಡತಿ ಮತ್ತು ಮಗನಾಗಿರುತ್ತಾರೆ.

Jayalingappa M

4) 1ನೇ ವಾದಿಯ ಮೃತ ಗಂಡ ಪ್ರಕಾಶ ಎಂ ಇವರು ಮಧ್ಯವೆಸನಿಯಾಗಿದ್ದು, ಜವಾಬ್ದಾರಿ ವ್ಯಕ್ತಿ ಆಗಬಹುದೆಂದು ಭಾವಿಸಿ ವಿವಾಹವನ್ನು ಮಾಡಿದರೂ ಸಹ ನಡವಳಿಕೆಗಳನ್ನು ಸುಧಾರಿಸಿಕೊಳ್ಳದೇ ದುಶ್ಚಟಗಳಿಗೆ ಬಲಿಯಾಗಿ ಕರಳು ಹಾಳಾಗಿ ಮೃತಪಟ್ಟಿದ್ದು, ಇವರ ಚಿಕಿತ್ಸೆಗೆ ಸುಮಾರು 5,00,000/-(ಐದು ಲಕ್ಷ) ರೂಗಳು ಖರ್ಚಾಗಿದ್ದು, ಈ ಸಾಲವನ್ನು ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದ ನಾನು ದುಡಿದು ತೀರಿಸಿರುತ್ತೇನೆ. ಪ್ರಕಾಶ ಎಂ ಇವರು ವೈಯಕ್ತಿಕ ದುಶ್ಚಟಗಳಿಗೆ ಮಾಡಿದ 4,00,000/-(ನಾಲ್ಕು ಲಕ್ಷ) ರೂಗಳ ಖಾಸಗಿ ಸಾಲವನ್ನು ಅನಿವಾರ್ಯ ಸಂದರ್ಭದಲ್ಲಿ ನಾನು ಪಾವತಿಸಿದ್ದು ಇರುತ್ತದೆ.

5) ದಾವಾ "ಎ" ಶೆಡ್ಯೂಲ್ ಕ್ರಮ ಸಂಖ್ಯೆ 1 ರ ಸ.ನಂ.103/5 ರ 1 ಎಕರೆ 20 ಗುಂಟೆ, ಸ.ನಂ.130/3 ರ 0-25 ಗುಂಟೆ ತರಿ ಖುಷ್ಕಿ ಜಮೀನುಗಳು ಹಾಗೂ ಕ್ರಮ ಸಂಖ್ಯೆ 5 ರ ಖಾ ನಂ.50/2 ಹಾಗೂ ಖಾ ನಂ.51/2 ಹಾಗೂ ಕ್ರಮ ಸಂಖ್ಯೆ 6 ರ ಖಾ ನಂ.52 ಹಾಗೂ ಕ್ರಮ ಸಂಖ್ಯೆ 7 ರಲ್ಲಿರುವ ಖಾ ನಂ.50/1 ಹಾಗೂ ಖಾ ನಂ.51/1 ರ ಸ್ವತ್ತುಗಳು ಮಾತ್ರ ನಮ್ಮ ತಂದೆ ಮಲ್ಲಪ್ಪ ಎಂ ಇವರಿಂದ ಪ್ರಾಪ್ತವಾದ ಆಸ್ತಿಗಳಾಗಿದ್ದು, ಈ ಸ್ವತ್ತುಗಳ ಪೈಕಿ ಜಮೀನುಗಳು ಮಲ್ಲಪ್ಪ ಎಂ ಇವರಿಗೆ ಅವರ ತಂದೆಯಿಂದ ಬಂದ ಆಸ್ತಿಗಳಾಗಿದ್ದು, ಖಾನೆಷುಮಾರಿ ಸ್ವತ್ತುಗಳು ಅವರು ಸ್ವಂತ ಗಳಿಸಿದ ಆಸ್ತಿಗಳಾಗಿರುತ್ತವೆ.

NOTARY
DAKAPPA D
In & throughout
Shimoga Dist.
Regd. No.21534
Expiry Date
07.03.2030
GOVT. OF I

6) ದಾವಾ "ಎ" ಶೆಡ್ಯೂಲ್ ಕ್ರಮ ಸಂಖ್ಯೆ 1 ಮತ್ತು 2 ರ ಜಮೀನುಗಳು ಆದಾಯ ತರದೇ ಇರುವ ನೀರಾವರಿ ವ್ಯವಸ್ಥೆ ಇಲ್ಲದೇ ಇರುವ ಬರಡು ಜಮೀನುಗಳಾಗಿದ್ದು, ಇವು ಹೆಸರಿಗೆ ಮಾತ್ರ ಆಸ್ತಿಗಳಾಗಿದ್ದು, ಈ ಸ್ವತ್ತುಗಳಿಂದ ಯಾವುದೇ ಆದಾಯ ಇಲ್ಲದೇ ಇರುವುದರಿಂದ ಗುತ್ತಿಗೆ ಆಧಾರದಲ್ಲಿ ರೈತರಿಗೆ ಸಾಗುವಳಿ ಮಾಡಲು ನನ್ನ ತಂದೆಯ ಕಾಲದಿಂದಲೂ ಕೊಟ್ಟಿದ್ದು, ಬೆಳೆ ಬಂದಾಗ ಅಲ್ಪ ಸ್ವಲ್ಪ ಮೊತ್ತವನ್ನು ಊಟಕ್ಕೆ ರೈತರು ಕೊಡುತ್ತಾ ಬಂದಿದ್ದು ಇರುತ್ತದೆ. ತಂದೆಯಿಂದ ಬಂದ ಖಾನೆಷುಮಾರಿ ಸ್ವತ್ತುಗಳಿಂದ ಯಾವುದೇ ಆದಾಯ ಇಲ್ಲದೇ ಇರುವುದರಿಂದ ಊಟಕ್ಕೂ ಬಟ್ಟೆಗೂ ಕೊರತೆಯಾಗಿ ಜೀವನ ಸಾಗಿಸುವುದು ಕಷ್ಟ ಎಂಬ ಸಂದರ್ಭದಲ್ಲಿ ನಾನು ನನ್ನ 16ನೇ ವಯಸ್ಸಿನಲ್ಲಿ ಕೂಲಿ ಮಾಡಿ, ವಿಧ್ಯಾಭ್ಯಾಸ ಮಾಡಿಕೊಂಡು, ಪ್ರಾಪ್ತ ವಯಸ್ಸಿಗೆ ಬಂದ ನಂತರದಲ್ಲಿ ಭತ್ತ ಹಾಗೂ ಇತರೆ

ವ್ಯಾಪಾರಗಳನ್ನು ಮಾಡಿಕೊಂಡು, ಡಿಪ್ಲಮೋ ಪದವಿಯನ್ನು ಪಡೆದುಕೊಂಡು, 10 ವರ್ಷಗಳ ಕಾಲ ಶಿವಮೊಗ್ಗ, ಸಿಂಧನೂರು, ಹಾವೇರಿ ಹಾಗೂ ಆನವಟ್ಟಿ ಶಹರಗಳಲ್ಲಿ ಜೂನಿಯರ್ ಇಂಜಿನಿಯರ್ ಆಗಿ ವಿವಿಧ ವಿಲಾಖೆಗಳಲ್ಲಿ ಕೆಲಸ ಮಾಡಿದ್ದು ಇರುತ್ತದೆ. ನಂತರದಲ್ಲಿ ಅಗತ್ಯ ಲೈಸೆನ್ಸ್ ವಗ್ಯೆರೆ ಪಡೆಯುವುದರ ಮೂಲಕ ಈಗ್ಗೆ ಸುಮಾರು 25 ವರ್ಷಗಳಿಂದ ಎಣ್ಣೆಕೊಪ್ಪ ಗ್ರಾಮದಲ್ಲಿ ಕಿರಾಣಿ ವ್ಯಾಪಾರವನ್ನು ಹಾಗೂ ಇತರೆ ವ್ಯಾಪಾರಗಳನ್ನು ನಿರ್ವಹಿಸಿಕೊಂಡು ಬಂದಿರುತ್ತೇನೆ.

7) ನಾನು ನನ್ನ ಚಿಕ್ಕ ವಯಸ್ಸಿನಲ್ಲಿಯೇ ಕುಟುಂಬದಲ್ಲಿ ಇದ್ದ ಆರ್ಥಿಕ ತೊಂದರೆಗಳನ್ನು ನೀಗಿಸಿಕೊಳ್ಳಲು ದುಡಿಮೆಗೆ ಇಳಿದು, ಮನೆಯ ಖರ್ಚುಗಳನ್ನು ನೋಡಿಕೊಂಡು, ಸಹೋದರಿ ಮತ್ತು ಸಹೋದರನ ಮದುವೆಯ ಖರ್ಚುಗಳನ್ನು ಸಹ ಭರಿಸಿ, ಕುಟುಂಬವನ್ನು ಸಹ ಮುಂದುವರೆಸಿಕೊಂಡು ಬಂದಿರುತ್ತೇನೆ. ನನ್ನ ತಂದೆ ಗಂಟಲಿನ ಕ್ಯಾನ್ಸರ್‌ನಿಂದ ಮೂರು ವರ್ಷಗಳ ಕಾಲ ನಿರಂತರ ಚಿಕಿತ್ಸೆಯನ್ನು ಪಡೆದು ಮೃತಪಟ್ಟಿದ್ದು, ತಾಯಿಯು ಮೆದುಳು ರಕ್ತಸ್ರಾವವಾಗಿ ಮತ್ತು ಹೃದಯಾಘಾತಕ್ಕೊಳಗಾಗಿ ಮೃತಪಟ್ಟಿದ್ದು, ಇವರ ಚಿಕಿತ್ಸೆಗಾಗಿ ಸಂಬಂಧಪಟ್ಟಂತೆ ಹೇರಳ ಹಣ ಖರ್ಚಾಗಿದ್ದು, ಇದನ್ನು ನಾನು ಭರಿಸಿರುತ್ತೇನೆ.

8) ನಾನು ಹೀಗೆ ನನ್ನ ಚಿಕ್ಕ ವಯಸ್ಸಿನಲ್ಲಿಯೇ ಸ್ವತಂತ್ರವಾಗಿಯೇ ದುಡಿಮೆ ಮಾಡುತ್ತಾ ಹಣ ಸಂಪಾದನೆ ಮಾಡುತ್ತಾ ಹಣ ಸಂಪಾದನೆ ಮಾಡುತ್ತಾ, ಆರ್ಥಿಕವಾಗಿ ಪ್ರಗತಿಯನ್ನು ಸಾಧಿಸುತ್ತಾ ಬಂದಿದ್ದು, ನನ್ನ ವ್ಯವಹಾರಿಕ ಜ್ಞಾನವನ್ನು ಬೆಳೆಸಿಕೊಳ್ಳುವುದರ ಮೂಲಕ ಸ್ವಂತ ದುಡಿಮೆಯ ಹಣದಲ್ಲಿ ದಿನಾಂಕ:04-01-1985 ರಂದು ತಮ್ಮ 19ನೇ ವಯಸ್ಸಿನಲ್ಲಿಯೇ ಕಮನವಳ್ಳಿ ಗ್ರಾಮದ ಎ ಬಸವಂತಪ್ಪ ಬಿನ್ ಯಲ್ಲಪ್ಪ ಇವರಿಂದ ಸೈಟ್ ನಂ.1 ರ ಸ್ವತ್ತನ್ನು ಅಂದರೆ ದಾವಾ "ಎ" ಶೆಡ್ಯೂಲ್ ಕ್ರಮ ಸಂಖ್ಯೆ 3 ರ ಸ್ವತ್ತನ್ನು ಹಾಗೂ ಖಾನೆಷುಮಾರಿ ನಂ.1ಪಿ ರ ಸ್ವತ್ತನ್ನು ಅಂದರೆ ದಾವಾ "ಎ" ಶೆಡ್ಯೂಲ್‌ನ ಕ್ರಮ ಸಂಖ್ಯೆ 4 ರ ಸ್ವತ್ತನ್ನು ಸ್ವತ್ತಿನ ಮೂಲ ಮಾಲೀಕರಾದ ಮಂಜಮ್ಮ ಕೋಂ ಚಂದ್ರಪ್ಪ ಇವರಿಂದ ಕ್ರಯಕ್ಕೆ ಪಡೆದಿದ್ದು, ಸದರಿ ಕ್ರಯ ಪತ್ರವು ಕ್ರಮವಾಗಿ ಎಸ್.ಆರ್ ನಂ. ಬಿ ಕೆ-1-465 ರ ಸಂಪುಟ

NOTARY
DAKAPPA D
In Karnataka throughout
Shimoga Dist.
Regd. No.21534
Expiry Date
07-03-2030
OF INDIA

Jayalingappa

31, 32ನೇ ಪುಟಗಳ 1984-85ನೇ ಇಸವಿಯ 856ನೇ ಸಂಪುಟದಲ್ಲಿ ದಿನಾಂಕ:04-01-1985 ರಂದು ಹಾಗೂ ಎಸ್.ಆರ್ ನಂ. ಬಿ.ಕೆ 1-517 ರ ಸಂಪುಟದ, 134, 135ನೇ ಪುಟಗಳ 1994-995ನೇ ಇಸವಿಯ 1999ನೇ ಸಂಪುಟದಲ್ಲಿ ದಿನಾಂಕ:15-06-1993 ರಂದು ನೋಂದಾಯಿಸಲ್ಪಟ್ಟಿರುತ್ತದೆ. ಸದರಿ ಕ್ರಯ ಪತ್ರಗಳ ಪ್ರಕಾರ ಸಂಬಂಧಪಟ್ಟ ಗ್ರಾಮ ಪಂಚಾಯ್ತಿಯಲ್ಲಿ ಸ್ವತ್ತುಗಳ ಖಾತೆಯು ನನ್ನ ಹೆಸರಿಗೆ ಬದಲಾವಣೆ ಆಗುವುದರ ಮೂಲಕ ಎರಡು ಸ್ವತ್ತುಗಳಿಗೆ ನಾನು ಏಕೈಕ ಹಕ್ಕುದಾರನಾಗಿ, ಮಾಲೀಕನಾಗಿ ಮತ್ತು ಸ್ವಾದೀನದಾರನಾಗಿ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದಿರುತ್ತೇನೆ. ಸದರಿ ಸ್ವತ್ತುಗಳ ಮೇಲೆ ನನ್ನನ್ನು ಹೊರತುಪಡಿಸಿ ಬೇರೆ ಯಾರಿಗೇ ಆಗಲೀ, ಯಾವುದೇ ರೀತಿಯ ಹಕ್ಕು ಬಾದ್ಯತೆಗಳು ಯಾ ಸ್ವಾದೀನಾನುಭವ ಇರುವುದಿಲ್ಲ. ಈ ಸ್ವತ್ತುಗಳು ನನ್ನ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಸದರಿ ಸ್ವತ್ತುಗಳಿಗೆ ಸಂಭಂಧಪಟ್ಟಂತೆ ಸಲ್ಲಿಸಿರುವ ವಾದಿಯ ದಾವೆಯು ವಜಾ ಆಗಲು ಯೋಗ್ಯವಾಗಿರುತ್ತದೆ.

9) 1ನೇ ವಾದಿಯ ಗಂಡನಾದ ಮತ್ತು ನನಗೆ ಸಹೋದರನಾದ ಪ್ರಕಾಶ ಎಂ ಇವರ ಜೀವಿತದ ಅವಧಿಯಲ್ಲಿ ಸದರಿಯವರ ಹೆಸರಿಗೆ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್ ಆನವಟ್ಟಿ ಶಾಖೆಯಲ್ಲಿ 47,002/- ರೂಗಳನ್ನು ರಶೀದಿ ನಂ.439330 ರಲ್ಲಿ, 46,943/- ರೂಗಳನ್ನು ರಶೀದಿ ಸಂಖ್ಯೆ 439329 ರಲ್ಲಿ ದಿನಾಂಕ:05-09-2020 ರಂದು ಹಾಗೂ 1,71,670/- ರೂಗಳನ್ನು ರಶೀದಿ ಸಂಖ್ಯೆ 439374 ರಲ್ಲಿ ದಿನಾಂಕ:28-09-2020 ರಂದು ನಿಗಧಿತ ಅವಧಿಗೆ ಸದರಿ ಪ್ರತಿವಾದಿಯು ಠೇವಣಿ ಇಟ್ಟಿದ್ದು ಇರುತ್ತದೆ.

10) 1ನೇ ವಾದಿಯ ಗಂಡ ಪ್ರಕಾಶ ಇವರು ಮರಣ ಹೊಂದಿದ ನಂತರದಲ್ಲಿ 1ನೇ ವಾದಿಯು ಮರು ವಿವಾಹವಾಗಲು ಬಯಸಿದ್ದು, ಇಂತಹ ಸಂದರ್ಭದಲ್ಲಿ ಇವರ ಮರುವಿವಾಹಕ್ಕೆ ನಾನು ಮತ್ತು ಇತರರು ಸಮ್ಮತಿ ಸೂಚಿಸಿದ್ದು, 1ನೇ ವಾದಿಯನ್ನು ಬೆಂಗಳೂರು ಶಹರದ ಅತ್ಯಂತ ಪ್ರತಿಷ್ಠಿತ ಶ್ರೀಮಂತ ವ್ಯಕ್ತಿಯಾದ ಸುಬ್ರಮಣ್ಯ ಎಂಬುವರು ವಿವಾಹವಾಗಿದ್ದು, ಸದರಿಯವರು ಆರ್ಥಿಕವಾಗಿ ಅತ್ಯಂತ ಉತ್ತಮ ಸ್ಥಿತಿಯಲ್ಲಿದ್ದು ಮತ್ತು ಉದಾರ

NOTARY
DAKAPPA D
In & throughout
Shimoga Dist.
Regd. No. 21534
Expiry Date
07.03.2030
GOVT. OF INDIA

Jayalingappa

ಹೃದಯವುಳ್ಳವರಾಗಿದ್ದು, 1ನೇ ವಾದಿಯನ್ನು ಮದುವೆಯಾಗುವ ಸಂದರ್ಭದಲ್ಲಿ 1ನೇ ವಾದಿಯ ಗಂಡನ ಕುಟುಂಬದಲ್ಲಿ ಯಾವುದೇ ಆಸ್ತಿಯನ್ನು ಪಡೆಯುವುದು ಬೇಡ ಎಂದು ಉತ್ತಮ ಧರ್ಮದ ಸಲಹೆಯನ್ನು 1ನೇ ವಾದಿಗೆ ನೀಡಿದ್ದು, ಆದಾಗ್ಯೂ ಸಹ ನಾನು ಗ್ರಾಮದ ಹಿರಿಯರ ಸಮಕ್ಷಮದಲ್ಲಿ ನನ್ನ ಸ್ವಂತ ಆಸ್ತಿಗಳನ್ನು ಹೊರತುಪಡಿಸಿ, ದಾವಾ "ಎ" ಶೆಡ್ಯೂಲ್‌ನಲ್ಲಿ ಕಾಣಿಸಿರುವ ಉಳಿದ ಕ್ರಮ ಸಂಖ್ಯೆ 1, 2, 5 ರಿಂದ 7 ರ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಹಿಸ್ಸೆ ಬಗ್ಗೆ ತೀರ್ಮಾನ ಮಾಡಿ ವಾದಿಯರ ಹಿಸ್ಸೆ ಹಕ್ಕಿನ ಮೌಲ್ಯವಾಗಿ ಪ್ರಕಾಶ ಎಂ ಇವರ ಹೆಸರಿಗೆ ಇಟ್ಟಿದ್ದು, ಮೇಲೆ ಹೇಳಿದ ಮೂರು ನಿಗಧಿತ ಠೇವಣಿ ಹಣಗಳ ಬಾಂಡ್‌ಗಳ ಮೂಲಕ ಬರಬೇಕಾದ 3,00,000/-(ಮೂರು ಲಕ್ಷ) ಹಣವನ್ನು ವಾದಿಗೆ ನೀಡಿದ್ದು ಇರುತ್ತದೆ. ಹೀಗೆ ವಾದಿಯರ ಹಿಸ್ಸೆ ಹಕ್ಕು ಈ ತೀರ್ಮಾನದ ಮೂಲಕ ಸಂಪೂರ್ಣವಾಗಿ ನಷ್ಟವಾಗಿದ್ದು, ಕಮನವಳ್ಳಿ ಗ್ರಾಮದ ಹಿರಿಯರಾದ ರುದ್ರಪ್ಪ ಕಡ್ಲೇರ್ ಬಿನ್ ಶಿವಪ್ಪ ಹಾಗೂ ಮಂಜಪ್ಪ ಬಿನ್ ಕರಬಸಯ್ಯ ಇವರ ಸಮಕ್ಷಮದಲ್ಲಿ ಇದರ ಬಗ್ಗೆ ಬಾಯಿ ಮಾತಿನ ತೀರ್ಮಾನದ ಹಿಸ್ಸೆ ಆಗಿರುತ್ತದೆ. ಈ ಸಂದರ್ಭದಲ್ಲಿ 1ನೇ ವಾದಿಯ ತಾಯಿ ಹಾಗೂ ಅವರ ತವರು ಮನೆಯ ಗ್ರಾಮದ ಹಿರಿಯರು ಸಹ ಹಾಜರಿರುತ್ತಾರೆ.

11) ದಾವಾ "ಬಿ" ಶೆಡ್ಯೂಲ್ ಕ್ರಮ ಸಂಖ್ಯೆ 1 ರಲ್ಲಿ ವಿವರಿಸಿರುವ ಎರಡು ಕಿರಾಣಿ ಅಂಗಡಿಗಳು ಎಂಬುದು ಸುಳ್ಳು. ಒಂದು ಕಿರಾಣಿ ಅಂಗಡಿ ನಾನು ಸ್ವಂತ ನಡೆಸುವ ಅಂಗಡಿಯಾಗಿದೆ. ದಾವಾ "ಬಿ" ಶೆಡ್ಯೂಲ್ ಕ್ರಮ ಸಂಖ್ಯೆ 2 ರಿಂದ 25 ರಲ್ಲಿ ವಿವರಿಸಿರುವ ಚರ ಸ್ವತ್ತುಗಳು ಕಾಲ್ಪನಿಕವಾಗಿ ಸೃಷ್ಟಿಸಿಕೊಂಡ ಆಸ್ತಿಗಳಾಗಿದ್ದು, ಅಂತಹ ಯಾವುದೇ ಚರ ಸ್ವತ್ತುಗಳು ಅಥವಾ ಬಂಗಾರದ ಆಭರಣಗಳು, ಬೆಳ್ಳಿಯ ಸಾಮಾನುಗಳು, ಪೀಠೋಪಕರಣಗಳು ಯಾವುದೂ ಕೂಡಾ ಅಸ್ಥಿತ್ವದಲ್ಲಿರುವುದಿಲ್ಲ.

12) ದಾವಾ "ಸಿ" ಶೆಡ್ಯೂಲ್‌ನಲ್ಲಿ ವಿವರಿಸಿರುವ ಎಲ್.ಐ.ಸಿ ಪಾಲಿಸಿ ಬಾಂಡ್‌ಗಳಾಗಲೀ, ಬ್ಯಾಂಕ್ ಠೇವಣಿ ಹಣವಾಗಲೀ, ಆರ್.ಡಿ ಕಾಫಿಯ ಮೊತ್ತವಾಗಲೀ ಇರುವುದಿಲ್ಲ. ಇವುಗಳು ಕಾಲ್ಪನಿಕವಾಗಿ ಸೃಷ್ಟಿಸಿದ ವಿಷಯಗಳಾಗಿರುತ್ತವೆ. ಕಾರಣ ದಾವಾ "ಬಿ" ಮತ್ತು

Jayalingappa

NOTARY
DAKAPPA D
In & throughout Shimoga Dist.
Regd. No.21534
Expiry Date 07.03.2030
GOVT. OF INDIA

"ಸಿ" ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾವೆಯು ವಜಾ ಆಗಲು ಯೋಗ್ಯವಾಗಿರುತ್ತವೆ.

13) 1ನೇ ವಾದಿಯು ಗ್ರಾಮದ ಪಂಚರ ಸಮಕ್ಷಮ ದಾವಾ "ಎ" ಶೆಡ್ಯೂಲ್ ಕ್ರಮ ಸಂಖ್ಯೆ 1, 2 ಮತ್ತು 5 ರಿಂದ 7 ರ ಸ್ವತ್ತುಗಳಲ್ಲಿನ ತಮ್ಮ ಹಾಗೂ ತಮ್ಮ ಮೈನರ್ ಮಗ 2ನೇ ವಾದಿಯ ಹಿಸ್ಸೆ ಹಕ್ಕಿನ ಮೌಲ್ಯವಾಗಿ 3,00,000/-(ಮೂರು ಲಕ್ಷ) ರೂಗಳನ್ನು ಪಡೆದುಕೊಂಡಿರುವುದರಿಂದ ಸದರಿಯವರ ಹಿಸ್ಸೆ ಹಕ್ಕು ಸಂಪೂರ್ಣವಾಗಿ ನಷ್ಟವಾಗಿದ್ದು, ಆದರೆ ಲೇಕಿ ಮೂಲಕ ದಾಖಲೆ ಆಗದೇ ಇರುವುದರಿಂದ ಅಕ್ರಮ ಲಾಭ ಹೊಂದುವ ದುರುದ್ದೇಶದಿಂದ, ವಿಷಯಗಳನ್ನು ಹುಟಾರು ಮಾಡಿಕೊಂಡು, ನನ್ನನ್ನು ಬೆದರಿಸುವ ತಂತ್ರವಾಗಿ ಮತ್ತು ನನಗೆ ಮಾನಸಿಕವಾಗಿ ಹಿಂಸೆ ನೀಡುವ ಕಾರಣದಿಂದ ಒಂದು ಸುಳ್ಳು ದಾವೆಯನ್ನು ತಂದಿರುತ್ತಾರೆ. ಯಾವುದೇ ರೀತಿಯ ವ್ಯಾಜ್ಯಾಕಾರಣವನ್ನು ಹೊಂದಿರದೆ ಶುದ್ಧ ಮನಸ್ಸಿನಿಂದ ಮತ್ತು ಸ್ವಚ್ಛ ಕೈಗಳಿಂದ ನ್ಯಾಯದಾನ ಬಯಸಿ ಬಂದ ಪ್ರಕರಣವಾಗಿರುವುದಿಲ್ಲ.

ಕಾರಣ ಗೌರವಾನ್ವಿತ ನ್ಯಾಯಾಲಯದವರು ವಾದಿಯರು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ ಎಂದು ಪ್ರಮಾಣ ಮಾಡಿ ಹೇಳುತ್ತೇನೆ.

ಮೇಲ್ಕಂಡ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆಂದು ಪ್ರಮಾಣ ಮಾಡಿ ಹೇಳುತ್ತೇನೆ.

GURUNATH M. PATIL
B.A. LL.B., (Spl.)
ADVOCATE, KAR No. 271/1997
SORAB-577 429 Mob: 94489 76914
email gmpatil...@gmail.com

ಗುರುತಿಸುವವರು

ವಕೀಲರು/ಸೊರಬ

ದಿನಾಂಕ:-28-07-2026.

No Correction

Solemnly Affirmed / Sworn to before me on the 28 day of 7 2026 the contents of this Affidavit having been read over and explained to the deponent who appeared ... to understand the same and signed perfectly ... his name/made his marks in my presence.

ಪ್ರಮಾಣ ಮಾಡುವವರು

DAKAPPA D.
ADVOCATE & NOTARY
GOVT. OF INDIA
SORAB Shimoga Dist.

**ದಿನಾಂಕಃ 28.07.2026 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪ್ರತಿವಾದಿ ನಂ.1 ಪರ ಶ್ರೀ ಜಿ ಎಂ ಪಿ ವಕೀಲರಿಂದಃ**

ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳೆಲ್ಲವೂ ನಿಜವಿದ್ದು, ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ದಿನಾಂಕಃ 04.01.1985 ಮತ್ತು 14.06.1993 ರ ಮೂಲ ಕ್ರಯಪತ್ರಗಳನ್ನು ನಿಡಿ-1 ಮತ್ತು 2, ಮ್ಯುಟೇಷನ್ ನಿಡಿ-3, (ಅಪೂರ್ಣವಾದ) ಅಸ್ಸೆಸ್ಮೆಂಟ್ ಎಕ್ಸಟ್ರಾಕ್ಟ ದಾಖಲೆಗಳನ್ನು ನಿಡಿ-4 ರಿಂದ 7, ಟ್ಯಾಕ್ಸ ಡಿಮ್ಯಾಂಡ್ ರಿಜಿಸ್ಟರ್ ಎಕ್ಸಾಟ್ರಾಕ್ಟಗಳನ್ನು ನಿಡಿ-8 ಮತ್ತು 9, ಕಂದಾಯ ಪಾವತಿ ರಸೀದಿಗಳನ್ನು ನಿಡಿ-10 ರಿಂದ 20 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ** ವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ,ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

28/7/26

Jayalingappa.M

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.